ಟೂರ್ನಮೆಂಟುಗಳನ್ನು ಮಾಡುವ, ನೈರ್ಮಲ್ಯ ಕಾಪಾಡುವ, ಹಳೆ ಗುಡಿ ಕಿತ್ತು ಕಟ್ಟಿಸುವ ನೆಪದಲ್ಲಿ ಊರೊಳಕ್ಕೆ ಹೊಸಬರು ಬಂದು ಹೋಗುತ್ತಿರುವುದು ಒಳ್ಳೆಯ ಲಕ್ಷಣ ಅಲ್ಲ. ಅದರ ಹಿಂದೆ ರಾಜಕೀಯವಿದೆ ಅಂತ ವಿಶ್ವನಾಥ ಬಿಡಿಸಿ ಹೇಳಿದ ಮೇಲೆ ಪ್ರೆಸಿಡೆಂಟರಿಗೆ ಗಾಬರಿ ಆಯಿತು. ಹೋಬಳಿಯ ಅನೇಕ ಊರುಗಳಲ್ಲೂ ಈಗ ಇಂಥದೇ ಚಟುವಟಿಕೆಗಳು ನಡೆಯುತ್ತಿವೆಯಂತೆ. ಮುಂದಿನ ವರ್ಷ ನಡೆಯುವ ಎಲೆಕ್ಷನ್ನಿಗೆ ನಿಲ್ಲುವ ವ್ಯಕ್ತಿಯೊಬ್ಬ ಇದನ್ನೆಲ್ಲ ಮಾಡಿಸುತ್ತಿದ್ದಾನೆ ಅನ್ನೋದು ಗೊತ್ತಾದ ಮೇಲೆ ಊರ ಮುಖಂಡರು ಆತಂಕಗೊಂಡರು. ಹೊರಗಿನವರು ಊರೊಳಕ್ಕೆ ಬರದಂತೆ ತಡೆಯಬೇಕು ಅಂದುಕೊಂಡರು. ಆದರೆ, ತಡೆಯುವುದು ಹೇಗೆ ಎನ್ನುವುದು ಗೊತ್ತಾಗದೆ ಸುಮ್ಮನಾದರು.

## 4

ಊರ ವಿಷಯಗಳಲ್ಲಿ ಹೊರಗಿನವರು ತಲೆ ಹಾಕುವುದು ಪ್ರೆಸಿಡೆಂಟರಿಗೆ ಇಷ್ಟವಾಗುತ್ತಿರಲಿಲ್ಲ. ಜನರ ತಲೆ ಕೆಡಿಸಿ ಕೊನೆಗೆ ಊರನ್ನೇ ಒಡೆಯುತ್ತಾರೆ ಅನ್ನೋ ಭಯ ಅವರಿಗಿತ್ತು. ಅನೇಕ ಸಲ ಅಂತಹವರನ್ನು ತಡೆದು ನಿಲ್ಲಿಸಿ ಉಗಿದು ಕಳಿಸುತ್ತಿದ್ದರು. ಈಗ ಸಮಾಜ ಸೇವಕರಂತೆ ಊರಿಗೆ ಬರುತ್ತಿರುವವರನ್ನು ನಿಯಂತ್ರಿಸುವುದು ಹೇಗೆನ್ನುವುದು ಗೊತ್ತಾಗದೆ ಪೇಚಾಡಿಕೊಂಡರು. ಏನಾದರೂ ಮಾಡೋಕೆ ಹೋದರೆ ಹೊಸ ಗುಡಿ ಕಟ್ಟೋ ಕೆಲಸ ನಿಂತೋಗುತ್ತೆ. ಹತ್ತು ಲಕ್ಷ ರೂಪಾಯಿ ಕೊಟ್ಟು ಗುಡಿ ಕಟ್ಟಿಸಿಕೊಡ್ತೀವಿ ಅಂತ ಬಂದೋರನ್ನು ನಾನು ತಡೆದೆ ಅನ್ನೋ ಕೆಟ್ಟ ಹೆಸರು ಬರುತ್ತೆ. ಮೊದಲು ಗುಡಿ ಮುಗಿಯಲಿ, ಆಮೇಲೆ ಏನು ಮಾಡಬೇಕು ಅಂತ ಯೋಚಿಸಿದರಾಯಿತು ಅಂತ ತೀರ್ಮಾನಿಸಿದರು. ಅದನ್ನು ತಮ್ಮ ಹಿಂಬಾಲಕರಿಗೂ ಹೇಳಿ ಅವರನ್ನೂ ಸುಮ್ಮನಿರಿಸಿದರು.

ಹಳೇ ಗುಡಿ ಕೆಡವಿ ಅಲ್ಲೇ ಹೊಸದನ್ನು ಕಟ್ಟೊ ಬದಲು ಎಲ್ಲಾದರೂ ಬಯಲಲ್ಲಿ ಕಟ್ಟಿದರೆ ವರ್ಷಕ್ಕೊಮ್ಮೆ ಜಾತ್ರೆ, ತೇರು, ಬಡಬಗ್ಗರ ಮದುವೆ, ಸಂತರ್ಪಣೆಗಳನ್ನು ನಡಸೋಕೆ ಅನುಕೂಲವಾಗುತ್ತೆ ಅನ್ನೋ ಮಾತುಗಳನ್ನು ಕೆಲವರು ತೇಲಿ ಬಿಟ್ಟರು.

ಗೋಮಾಳ ಬಿಟ್ಟರೆ ಊರವರಿಗೆಲ್ಲ ಸೇರಿದ ಜಾಗ ಇನ್ನೊಂದಿಲ್ಲ. ಅಲ್ಲಿ ಗುಡಿ ಕಟ್ಟಬೇಕು ಅಂದರೆ ಸರ್ಕಾರವನ್ನು ಕೇಳಬೇಕು. ಸರ್ಕಾರವನ್ನು ಕೇಳದೆ ಗೋಮಾಳದ ಒಂದು ಮೂಲೆಯಲ್ಲಿ ಗುಡಿ ಕಟ್ಟಿ ಬಿಡೋಣ, ಆಮೇಲೆ ಏನಾಗುತ್ತೋ ಆಗಲಿ ಅಂತ ಕೆಲವರು ಹೇಳಿದರು. ಆದರೆ, ಅಲ್ಲಿ ಹೊಸ ಗುಡಿ ಕಟ್ಟೋಕೆ ಸಮಿತಿಯವರು ಒಪ್ಪಲಿಲ್ಲ. ಪಕ್ಕದಲ್ಲೇ ಇರುವ ಹೊಲದಲ್ಲಿ ನೂರು ಬೈ ಎಂಬತ್ತು ಅಡಿಗಳಷ್ಟಾದರೂ ಜಾಗ ಸಿಕ್ಕರೆ ಅಲ್ಲಿ ಕಟ್ಟಬಹುದು ಅಂದರು.

ಐದಾರು ದಿನ ಕಳೆದ ಮೇಲೆ ಊರ ಮುಖಂಡರೆಲ್ಲ ಕೂತು ಮಾತಾಡಿದರು. ಹೊಸ ಗುಡಿಗೆ ಸ್ವಲ್ಪ ಜಮೀನು ಕೊಡುವಂತೆ ಮೊದೀನ್‌ನ ಕೇಳುವುದೆಂದು ತೀರ್ಮಾನವಾಯಿತು. ಅದು ಗೊತ್ತಾಗಿದ್ದೇ ತಡ ತನ್ನ ಹೊಲದಲ್ಲಿ ಗುಡಿಗೆ ಜಾಗ ಬಿಟ್ಟು ಕೊಡಲು ಮೊದೀನ್ ಒಪ್ಪಿದ. ಅದನ್ನು ಪ್ರೆಸಿಡೆಂಟರಿಗೂ ತಿಳಿಸಿದ. ಹೊಲದಲ್ಲಿ ಅಪ್ಪ, ಅಮ್ಮನ ಸಮಾಧಿಗಳಿವೆ ಅವಕ್ಕೆ ಏನೂ ಆಗಬಾರದು ಅಂತಲೂ ಹೇಳಿದ.

ಸ್ಥಳ ಪರಿಶೀಲನೆಗೆ ಬಂದ ಸಮಿತಿಯ ಸದಸ್ಯರು ಮೊದೀನ್ ಹೊಲದಲ್ಲಿ ಓಡಾಡಿ ಅಲ್ಲಿ ಸಮಾಧಿಗಳಿವೆ. ಗುಡಿ ಕಟ್ಟಿದರೆ ಮುಂದೆ ಸಮಸ್ಯೆ ಆಗಬಹುದು ಅಂದರು. ಸಮಾಧಿಗಳನ್ನು ಸ್ಥಳಾಂತರ ಮಾಡಿದರೆ ಆಗಬಹುದು ಅಂದರು.

ಸಮಾಧಿಗಳನ್ನು ಸ್ಥಳಾಂತರ ಮಾಡೋದು ಅಂದರೇನು? ಗುಡ್ಡೆಯೊಳಗಿರೊ ಇಮಾಂ ಸಾಬರ, ಅವರ ಹೆಂಡತಿಯ ತಲೆ ಬುರುಡೆ, ಮೂಳೆಗಳನ್ನು ಹೊರಕ್ಕೆ ತೆಗೆದು ಬೇರೆ ಕಡೆ ಗುಂಡಿ ತೋಡಿ ಅಲ್ಲಿಗೆ ಹಾಕಿ ಮಣ್ಣು ಮುಚ್ಚೋದು ಅಂತಲೇ? ಮತ್ತೆ ಸಮಾಧಿ ಮಾಡು ಅಂತ ಮೊದೀನ್‌ಗೆ ಹೇಳೋದೆಂಗೆ?